**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ):**– ಮಾನ್ಯ ಅಧ್ಯಕ್ಷರೆ, ಅವರೇ ಮೂವ್ ಮಾಡಿರುವಂಥ ನಿಲುವಳಿ ಸೂಚನೆಯನ್ನು ಅವರೇ ಬೇಡ ಎಂದು ಹೇಳುವುದು ಇದು ಒಂದು ದುರಂತ.

**ಶ್ರೀ ಬಿ.ಎಸ್. ಯಡಿಯೂರಪ್ಪ:**– ವಿರೋಧ ಪಕ್ಷದಲ್ಲಿ ಇದ್ದು ಅವರು ಅದನ್ನು ಹೇಳವುದು ಬೇಡ.

**ಅಧ್ಯಕ್ಷರು:**– ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:**– ಅವರೇ ನಿಲುವಳಿ ಸೂಚನೆಯ ನೋಟೀಸ್‌ನ್ನು ಕೊಟ್ಟು, ಅವರೇ ಬೇರೆ ವಿಷಯ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಸರಿಯಾಗಿ ಇರುವುದಿಲ್ಲವೆಂಬುದು ನನ್ನ ಅಭಿಪ್ರಾಯ.

**ಅಧ್ಯಕ್ಷರು:**– ಮೊದಲು ಪ್ರಶ್ನೋತ್ತರ ಮುಗಿಸೋಣ. ಶ್ರೀ ಎಂ.ಪಿ. ರೇಣುಕಾಚಾರ್ಯರವರು...

## 3. ಪ್ರಶ್ನೋತ್ತರವೇಳೆ

ಅ. ಚುಕ್ಕೆಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

### ಬೇಲೂರು–ಹೊನ್ನಾಳಿ ಮಧ್ಯೆ ಸೇತುವೆ ಶಿಥಲಗೊಂಡಿರುವ ಬಗ್ಗೆ

1(565) ಶ್ರೀ ರೇಣುಕಾಚಾರ್ಯ ಎಂ.ಪಿ.(ಹೊನ್ನಾಳಿ)) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೇಲೂರು–ಹೊನ್ನಳಿ ಮಧ್ಯೆಯಿರುವ ಶಿಥಿಲಗೊಂಡಿರುವ ಸೇತುವೆಗಳ ಸಂಖ್ಯೆ ಎಷ್ಟು;

ಆ) ಈ ಸೇತುವೆಯಲ್ಲಿ ಅಪಘಾತ ಸಂಭವಿಸಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಬಂದಿದೆಯೇ;

ಇ) ಹಾಗಿದ್ದಲ್ಲಿ ಶಿಥಿಲಗೊಂಡ ಈ ಸೇತುವೆಗಳ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಎಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೇಲೂರು–ಹೊನ್ನಾಳಿ ರಸ್ತೆಯ ಭಾಗದಲ್ಲಿ 7 ಸೇತುವೆಗಳಿದ್ದು, ಇವುಗಳಲ್ಲಿ 5 ಸೇತುವೆ ಶಿಥಿಲಗೊಂಡಿತ್ತು.

ಆ) ಬಂದಿರುವುದಿಲ್ಲ.

ಇ) ಹೊನ್ನಾಳಿ–ಶಿವಮೊಗ್ಗ ರಸ್ತೆಯ ಪುನಃಶ್ಚೇತನ ಕಾಮಗಾರಿಯ ಅಡಿಯಲ್ಲಿ ಶಿಥಿಲಗೊಂಡಿದ್ದ 5 ಸೇತುವೆಗಳನ್ನು ನಿರ್ಮಾಣ ಹಾಗೂ ದುರಸ್ಥಿ ಮಾಡಲಾಗಿದೆ.

**ಶ್ರೀ ಎಂ.ಪಿ. ರೇಣುಕಾಚಾರ್ಯ:**– ಸನ್ಮಾನ್ಯ ಸಭಾಧ್ಯಕ್ಷರೆ, ಶಿಥಿಲಗೊಂಡಿದ್ದ 5 ಸೇತುವೆಗಳನ್ನು ದುರಸ್ಥಿ ಮಾಡಲಾಗಿದೆ ಎಂದು ಈ ಸದನಕ್ಕೆ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟು ಸದನಕ್ಕೆ ಅಗೌರವ ತೋರಿಸಿದ್ದಾರೆ. ನೆನ್ನೆದಿವಸ ನಾನು ಸದರಿ ಸೇತುವೆಗಳ ಫೋಟೋ ತೆಗೆದು ಇಲ್ಲಿಗೆ ತಂದಿರುತ್ತೇನೆ. ಈ ಸೇತುವೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಇದಕ್ಕೆ ಬೈಕ್ ಸವಾರಿಗಳು ದಿನ ನಿತ್ಯ ಬೀಳುತ್ತಿದ್ದು, ಈಗಾಗಲೇ ಪ್ರಾಣ ಹಾನಿ ಕೂಡ ಆಗಿದೆ. ಹಾಗೆಯೇ, ಇದರ ಜೊತೆಗೆ ಸದರಿ ಸ್ಥಳಗಳಲ್ಲಿ ಅನೇಕ ಟ್ರಕ್‌ಗಳ ಅಪಘಾತ ಸಂಭವಿಸಿ ಜನರು ಸಾವಿಗೆ ಈಡಾಗಿದ್ದಾರೆ, ಇದರ ಬಗ್ಗೆ ಅಧಿಕಾರಿಗಳು ಯಾವುದೇ ರೀತಿಯ ಮಾಹಿತಿಯನ್ನು ಕೊಟ್ಟಿಲ್ಲ. ಮತ್ತೆ ಸದರಿ ಸೇತುವೆಗಳು ಇದುವರೆಗೂ ದುರಸ್ಥಿಯಾಗಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:–** ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಾ ಸೇತುವೆಗಳ ರಿಪೇರಿ ಕೆಲಸವಾಗಿಲ್ಲವೆಂದು ಹೇಳಿದ್ದಾರೆ. 7 ಸೇತುವೆಗಳಲ್ಲಿ ಈಗಾಗಲೇ 5 ಸೇತುವೆಗಳ ದುರಸ್ತಿ ಕೆಲಸವಾಗಿದೆ ಎಂದು ಉತ್ತರ ನೀಡಲಾಗಿದೆ. 5 ಸೇತುವೆಗಳ ರಿಪೇರಿ ಕೆಲಸ ಆಗದೇ ಇರುವ ಬಗ್ಗೆ ಅವರ ಹತ್ತಿರ ಏನಾದರೂ ಮಾಹಿತಿ ಇದ್ದಲ್ಲಿ, ಅದನ್ನು ನನಗೆ ಕಳುಹಿಸಿಕೊಟ್ಟರೆ ನಾನು ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಂ.ಪಿ. ರೇಣುಕಾಚಾರ್ಯ:–** ಮಾನ್ಯ ಸಚಿವರಿಗೆ ಸೇತುವೆಗಳ ಫೋಟೋಗಳನ್ನು ಕಳುಹಿಸಿಕೊಡುತ್ತೇನೆ. ಆದಷ್ಟು ಬೇಗ ಈ ಎಲ್ಲಾ ಸೇತುವೆಗಳ ದುರಸ್ಥಿ ಕೆಲಸ ಆಗಬೇಕು.

**ಶ್ರೀ ಹೆಚ್.ಡಿ. ರೇವಣ್ಣ:–** ಮಾಹಿತಿ ಕಳುಹಿಸಿಕೊಟ್ಟರೆ ನಾನು ಮಾಡಿಸುತ್ತೇನೆ.

**ಶ್ರೀ ಶಿವರಾಜ್ ಸಜ್ಜನ್:–** ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ತಪ್ಪು ಮಾಹಿತಿ ನೀಡಿರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, 5 ಸೇತುವೆಗಳ ದುರಸ್ಥಿ ಕೆಲಸವಗಿದೆ ಎಂದು ಉತ್ತರ ಕಳುಹಿಸಿಕೊಟ್ಟಿರುತ್ತಾರೆ. ಆದರೆ, ಸದರಿ ಸೇತುವೆಗಳ ದುರಸ್ಥಿ ಕೆಲಸವಾಗಿಲ್ಲವೆಂದು ಮಾನ್ಯ ಸದಸ್ಯರು ಫೋಟೋ ಸಮೇತ ತೋರಿಸುತ್ತಿದ್ದಾರೆ. ಆದ್ದರಿಂದ, ಈ ಸದನಕ್ಕೆ ಅಗೌರವವನ್ನು ಕೊಟ್ಟಿದ್ದಾರೆ. ಆದ್ದರಿಂದ ತಪ್ಪು ಮಾಹಿತಿ ನೀಡಿರತಕ್ಕಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಹೆಚ್.ಡಿ. ರೇವಣ್ಣ:–** ಸದರಿ ವಿಷಯವನ್ನು ನನಗೆ ಕಳುಹಿಸಿಕೊಡಲಿ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

**ಅರಸೀಕೆರೆ ಮಾಲೇಕಲ್ (ಚಿಕ್ಕತಿರುಪತಿ) ತಿರುಪತಿ ದೇವಾಲಯದಲ್ಲುಂಟಾದ ಕುಸಿತದಿಂದ ಸಾವಿಗೊಳಗಾದ ಕುಟುಂಬದವರಿಗೆ ಪರಿಹಾರಧನ**

2(69) ಶ್ರೀ ಎ.ಎಸ್. ಬಸವರಾಜು(ಅರಸೀಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಾಸನ ಜಿಲ್ಲೆ ಅರಸೀಕೆರೆ ಸಮೀಪದ ಮಾಲೇಕಲ್ (ಚಿಕ್ಕತಿರುಪತಿ) ದೇವಾಲಯದಲ್ಲಿ ಕಳೆದ ಸಾಲಿನಲ್ಲುಂಟಾದ ಸಾವು–ನೋವುಗಳ ಸಂಖ್ಯೆ ಎಷ್ಟು;

ಆ) ದೇವಾಲಯದಲ್ಲಿ ಗೋಪುರ ಕುಸಿತವುಂಟಾಗಲು ಕಾರಣಗಳೇನು; ಇದರಿಂದ ಉಂಟಾದ ನಷ್ಟ ಎಷ್ಟು;

ಇ) ಇದಕ್ಕಾಗಿ ಎಷ್ಟು ಹಣವನ್ನು ಪರಿಹಾರ ರೂಪದಲ್ಲಿ ನೀಡಲಾಗಿದೆ; ಯಾರ್ಯಾರಿಗೆ ಪರಿಹಾರ ನೀಡಿದೆ;

ಈ) ನೀಡದಿದ್ದಲ್ಲಿ, ಕಾರಣಗಳೇನು; ಯಾವಾಗ ನೀಡಲಾಗುತ್ತದೆ; ಸಾವಿಗೊಳಗಾದವರ ಕುಟುಂಬದವರಿಗೆ ಪರಿಹಾರ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು;

ಉ) ಈ ಅನಾಹುತಕ್ಕೆ ಯಾರನ್ನು ಕಾರಣರನ್ನಾಗಿ ಮಾಡಲಾಗಿದೆ; ಇಂತಹವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಅರಸೀಕೆರೆ ತಾಲ್ಲೂಕು ಮಾಲೇಕಲ್ ಚಿಕ್ಕತಿರುಪತಿಯಲ್ಲಿ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ರಥೋತ್ಸವ ದಿ:29/06/2004ರಂದು ಜರುಗಿದ ಸಂದರ್ಭದಲ್ಲಿ ನೂಕುನುಗ್ಗಲಿಂದ ಕಲ್ಲಿನ ಮಂಟಪ ಕುಸಿದ ಕಾರಣ 3 ಜನರ ಮೃತಪಟ್ಟು 39 ಜನ ಗಾಯಾಳುಗಳಾಗಿರುತ್ತಾರೆ.